 ISSN : 2583-2948

# ಹೊಲಿಗೆ ಯಂತ್ರದ ಅಮ್ಮಿ : ಒಂದು ನೋಟ

**ಡಾ. ವಿದ್ಯಾಸಾಗರ ತಂದೆ ಬಾಬುರಾವ**
ಕನ್ನಡ ಉಪನ್ಯಾಸಕರು,
ರಾಮ ಮನೋಹರ ಲೋಹಿಯಾ ಕಾಲೇಜು, ಆಳಂದ,
ಜಿಲ್ಲೆ ಕಲಬುರಗಿ
೯೦೦೮೨೮೧೩೦೬

ತಾಯಿಯು ಎಲ್ಲಾ ಜೀವಿಗಳಿಗೆ ಪೊರೆಯುವ ಸಂಕೇತವಾಗಿಯೆ ಕಂಡುಬರುತ್ತಾಳೆ. ಹೆತ್ತವ್ವ ತನ್ನ ಮಕ್ಕಳಿಗೆ ನೀಡುವ ಪ್ರೀತಿ ಹೇಳತಿರದು ಅದು ಅನುಭವದಿಂದಲೆ ಪಡೆಯಲು ಸಾಧ್ಯಾವಾದದ್ದು. ಮಾನವ ಸಮಾಜದಲ್ಲಿ ಆಗಲಿ ಇದು ಪ್ರಾಣಿ ಸಮಾಜದಲ್ಲಾಗಲಿ, ಇದು ಇದ್ದೆ ಇರುತ್ತದೆ. ಹಲವಾರು ಬಾರಿ ತನ್ನ ಪ್ರಾಣವನ್ನು ನೀಡಿ ಆದರೂ ತನ್ನ ಮಕ್ಕಳ ಬದುಕಿನಲ್ಲಿ ಬೆಳಕಾಗುವ ತಾಯಿಯ ಪ್ರೀತಿ ಮತ್ತು ತ್ಯಾಗ ಹೇಳತಿರದು. ಮಕ್ಕಳಿಗಾಗಿ ತನ್ನ ಜೀವಮಾನವೇ ಗಂಧದಂತೆ ಸವೆಸುವ ಜೀವವೇ ಈ ತಾಯಿಯಾಗಿದ್ದಾಳೆ. ಇಡಿ ಜೀವಮಾನದ ಉದ್ದಕ್ಕೂ ಮಕ್ಕಳ ಶ್ರೇಯಸ್ಸು ಅಭಿವೃದ್ಧಿಗಾಗಿ ಬಡದಾಡುವ ತಾಯಿಯನ್ನು ಇಳಿವಯಸ್ಸಿನಲ್ಲಿ ಗೌರವಿಸುವ ಕಾಪಡುವ ಹಾಗೂ ಪ್ರೀತಿಯನ್ನು ನೀಡುವ ಬಹಳ ದೊಡ್ಡ ಹೊಣೆಗಾರಿಕೆಯು ಎಲ್ಲಾ ಮಕ್ಕಳ ಕರ್ತವ್ಯ ಆಗಿದೆ.

ಇಂತಹ ತಾಯಿಯನ್ನು ಕುರಿತು ಈ ಪದ್ಯಯು ಮೌಲಿಕವಾದಂತಹ ಅಂಶಗಳನ್ನು ಪ್ರಚುರ ಪಡಿಸುತ್ತದೆ. ಇನ್ನೂ ಮುಂದುವರೆದು ಈ ಪದ್ಯವು ಧರ್ಮಾಂಧತೆ, ಅಂಧಶ್ರದ್ಧೆ ಹಾಗೂ ವೈಷಮ್ಯಗಳಿಂದ ತತ್ತರಿಸುತ್ತಿರುವ ವಾತವರಣವನ್ನು ಕವಿಯು ಹೊಲಿಗೆ ಯಂತ್ರದ ರೂಪಕದೊಂದಿಗೆ ಕಟ್ಟಿಕೊಟ್ಟದ್ದಾರೆ, ತಾಯಿಯ ಕೌಶಲ್ಯ ಶಕ್ತಿ, ಸಾಮರ್ಥ್ಯ, ವ್ಯಕ್ತಿತ್ವ ಹಾಗೂ ಸೃಷ್ಟಿಗುಣಗಳನ್ನು ಕಾಣಬಹುದು.

ರೊಟ್ಟಿ ಪಾಲು ಮಾಡಿದಂತೆ ಬಟ್ಟೆ ಗಡಿಕೊರೆದು
ಕತ್ತರಿಸುವ ಅಮ್ಮಿ ತುಂಡು ತುಂಡು ಸೇರಿಸಿ
ಹೊಲಿದು ಒಂದು ಮಾಡುತ್ತಾಳೆ
ಒಂದು ಕೈಯಲ್ಲಿ ಕತ್ತರಿ
ಮುಖವಾಡ ಒಡೆದು ಬಯಲಾಗಲು
ಮತ್ತೊಂದು ಕೈಯಲ್ಲಿ ಸೂಜಿ;
ಲೋಕದ ಮಾನ ಕಾಪಾಡಲು.

ಇಲ್ಲಿ ತಾಯಿಯು ಸಮಾನತೆಯ ಸಂಕೇತದಂತೆ ಕಂಡು ಬರುತ್ತಾಳೆ. ಮಕ್ಕಳಿಗೆ ರೊಟ್ಟಿಯು ಸರಿಯಾಗಿ ಹಂಚುವ ಅದು ಯಾರಿಗೆ ಎಷ್ಟು ಬೇಕು ಅಷ್ಟನ್ನು ಪ್ರೀತಿಯಿಂದ ಹಂಚುವ ತಾಯಿಯ ಗುಣವನ್ನು ಹೇಳುತ್ತದೆ. ಅದು ಹೇಗೆ ಎನ್ನುವುದಕ್ಕೆ ತಾಯಿಯು ಒಬ್ಬಳು ದರ್ಜಿಯನ್ನು ಆಗಿರುವುದರಿಂದ ಅದರ ರೂಪಕದ ಮೂಲಕವೇ ಅವಳ ಸಮಾನತೆಯ ಶಕ್ತಿಯನ್ನು ಹೇಳುತ್ತಾನೆ ರೊಟ್ಟಿ ಪಾಲು ಮಾಡಿದಂತೆ ಬಟ್ಟೆಯ ಗಡಿಕೊರೆದು ಕತ್ತರಿಸುವ ಅಮ್ಮಿ ತುಂಡು ತುಂಡು ಸೇರಿಸಿ ಹೊಲಿದು ಒಂದು ಮಾಡುತ್ತಾಳೆ. ಈ ಸಾಲುಗಳು ಪ್ರಮುಖವಾಗಿ ಬಟ್ಟೆಯನ್ನು ಹೊಲಿಗೆಯ ಸಂದರ್ಭದಲ್ಲಿ ಅಳತೆಯ ಪ್ರಕಾರವೇ ಕತ್ತರಿಸಬೇಕಾಗುತ್ತದೆ, ಸ್ವಲ್ಪ ಹೆಚ್ಚು ಕಡಿಮೆಯಾದರು ವಿಕಾರವಾಗಿ ಕಾಣುತ್ತದೆ. ಅಂತಹ ಸೂಕ್ಷ್ಮವಾದ ಕಾರ್ಯವದು. ಇಲ್ಲಿ ತಾಯಿಯು ಕೂಡ ಅಷ್ಟೆ ಸೂಕ್ಷ್ಮ ಮನಸ್ಸಿನ ಸಮಾನತೆಯ ಸಂಕೇತವಾಗಿ ಕಂಡುಬರುತ್ತಾಳೆ. ಮುಂದುವರೆದು ಹೇಳುವುದಾದರೆ ತಾಯಿ ಕೈಯಲ್ಲಿಯ ಕತ್ತರಿಯು ಮನುಷ್ಯನ ಮುಖವಾಡಗಳನ್ನು ಕತ್ತರಿಸಿ ಬಿಸಾಕ ಬೇಕಾಗಿದೆ. ಈ ರೀತಿಯಾದ ಕಾರ್ಯದಿಂದ ಮಾತ್ರ ಒಳ್ಳೆಯ ವ್ಯಕ್ತಿಯಾಗಲು ಸಾಧ್ಯವಾಗುತ್ತದೆ ಎಂಬ ತಿಳಿವನ್ನು ಹೇಳುತ್ತದೆ. ಕವಿತೆಯಲ್ಲಿ ಬರುವ ಸೂಜಿ ಮನುಷ್ಯನ ಮಿತಿ ಮತ್ತು ಸಣ್ಣತನ ಇರುವುದು ಸಹಜ ಆದರೂ ಇವುಗಳನ್ನು ತ್ಯಜಿಸಿ ಎಲ್ಲರನ್ನು ಒಂದುಗೂಡಿಸಿ ನಿಭಾಯಿಸಿ ಕೊಂಡು ಹೋಗುವುದು ಅನಿವಾರ್ಯ ಮತ್ತು ಇದೆ ಸರಿಯಾದ ದಾರಿ ಎಂಬುದನ್ನು ಹೇಳುತ್ತದೆ.

ಇದು ಬರಿ ಕುಟುಂಬದ ಸಂದರ್ಭದಲ್ಲಿ ಮಾತ್ರವಲ್ಲ ಸಮಾಜ, ನಾಡು ಮತ್ತು ದೇಶದ ಸಂದರ್ಭದಲ್ಲಿ ಕೂಡವೆಂಬ ಆಲೋಚನೆಯು ಕವಿ ಸೂಕ್ಷ್ಮವಾಗಿ ನೀಡಿದ್ದಾರೆ. ಮುಂದುವರೆದು ಇಲ್ಲಿ ತಾಯಿ ಮಕ್ಕಳನ್ನು ಸರಿಯಾದ ದಿಕ್ಕಿಗೆ ತೆಗೆದುಕೊಂಡು ಹೋಗುವ ಜೊತೆಗೆ ಕುಟುಂಬದ ಗೌರವ ಘನತೆಯನ್ನು ಕಾಪಾಡುವ ಸಂಕೇತದಂತೆ ಕಂಡುಬರುತ್ತಾಳೆ.

ಕಾಲಿನಿಂದ ಪೆಡಲು ತುಳಿಯುವ ಅಮ್ಮಿ
ಚಕ್ರ ತಿರುಗಿಸಿದಂತೆಲ್ಲಾ ಇತಿಹಾಸ
ಒಂದು ಸುತ್ತು ಉರುಳುತ್ತದೆ.

ಇಲ್ಲಿ ಕಾಲಿನ ಪೆಡಲು ತುಳಿಯುವ ಅಮ್ಮಿ ಚಕ್ರ ತಿರುಗಿಸಿದಂತೆಲ್ಲಾ ಇತಿಹಾಸ ಅಂದರೆ ಕುಟುಂಬವನ್ನು ಸಮಾನವಾಗಿ ತೂಗಿಸಿಕೊಂಡು ಹೋಗುವುದು ಅಷ್ಟು ಸರಳವಾದುದ್ದಲ್ಲ. ಇದೊಂದು ಇತಿಹಾಸವೆ ಅದೊಂದು ನಿರಂತರ ಪ್ರಕ್ರಿಯೆ ಆಗಿದೆ, ಚಕ್ರ ತಿರುಗಿದಂತೆಲ್ಲಾ ಎಂಬ ಮಾತು ಇದು ಒಂದು ವರ್ಷಕ್ಕೆ ನಿಂತು ಹೋಗುವುದಿಲ್ಲ ಹೀಗೆ ಸಾಗುತ್ತಲೆ ಇರುತ್ತದೆ ಇದನ್ನು ತಾಯಿ ನಿರಂತರವಾಗಿ ನಿಭಾಯಿಸಿಕೊಂಡು ಹೋಗುತ್ತಲೇ ಇರುತ್ತಾಳೆ. ಇದು ಅವಳ ಬದುಕಿನ

ಪರಿಶ್ರಮದ ಪಥವೇ ಆಗಿದೆ ಹೊರತು ಆರಾಮದಾಯಕವಾದ ದಾರಿ ಅಲ್ಲವೆಂಬುದನ್ನು ಕವಿ ಹೇಳುತ್ತಾನೆ, ಹೀಗೆ ತಾಯಿಯ ಶ್ರಮವನ್ನು ಇನ್ನೊಂದು ಪದ್ಯದಲ್ಲಿ ಕವಿ ಮುಂದುವರೆಸುತ್ತಾರೆ.

ಸೂಜಿ ಮೂಗಿಗೆ ದಾರಪೋಣಿಸುವ ಅಮ್ಮಿ
ಸಂತೆಯಲ್ಲಿ ಕೊಂಡುತಂದ ನಿರಾಕಾರಮಾನಕ್ಕೆ ಹೊಲಿಗೆ ಹಾಕಿ
ರೂಪು ನೀಡುತ್ತಾಳೆ ಆಕಾಶದಂತಹ, ಕಡಲಿನಂತಹ ಬಟ್ಟೆಗೆ
ನಮೂನನಮೂನೆಯ ಪಾತ್ರ ಕೊಡುವ ಅಮ್ಮಿಯೇ ಸೃಷ್ಟಿಕೃತೆ.

ಈ ಸಾಲುಗಳು ತಾಯಿಯು ಮಕ್ಕಳನ್ನು ಹೇರುವುದಷ್ಟೆಯಲ್ಲ ಅವರ ಬದುಕಿನ ದಾರಿ ದ್ವೀಪಕ್ಕಾಗಿ ಹೊರಾಡುವ ತಾಯಿಯ ಸಂಕಷ್ಟದ ಬದುಕನ್ನು ಹೇಳುತ್ತವೆ. ಹೇಗೆ ಸಂತೆಯಲ್ಲಿ ಕೊಂಡುತಂದ ಬಟ್ಟೆಗೆ ಆಕಾರವಿರುವುದಿಲ್ಲವೋ, ತದನಂತರ ಶ್ರಮ ಹಾಕುವುದರ ಮೂಲಕ ದರ್ಜಿಯು ಉಡಪನ್ನು ಅಚ್ಚುಕಟ್ಟಾಗಿ ತಯಾರಿಸಲಾಗುತ್ತದೆವೋ ಹಾಗೆ ತಾಯಿಯು ಮಗನನ್ನು ಪಾಲನೆ ಪೋಷಣೆಯನ್ನು ಮಾಡುವುದರ ಜೊತೆಗೆ ಮಗುವಿನ ಒಳ್ಳೆಯ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಲು ಹಾಕುವ ಶ್ರಮವನ್ನು ಹೇಳುತ್ತದೆ. ಒಂದು ಕಲ್ಲನ್ನು ಒಬ್ಬ ಶಿಲ್ಪಿಯು ಆಕಾರ ಕೊಟ್ಟಿರುವುದರಿಂದಲೇ ಆ ಮೂರ್ತಿಗೆ ಬೆಲೆ ಬಂದಿರುವುದು ಇಲ್ಲದೆ ಹೋದರೆ ಅದು ಕಗ್ಗಲ್ಲೆಯಾಗಿರುತ್ತಿತ್ತು. ಹಾಗೆಯೇ ತಾಯಿಯು ತನ್ನ ಮಕ್ಕಳ್ಳನ್ನು ಆಕಾರ ಕೊಡಿಸುವ ಇಲ್ಲಿ ಆಕಾರ ಅಂದರೆ ಮಕ್ಕಳನ್ನು ಸರಿಯಾದ ದಾರಿಯಲ್ಲಿ ಬೆಳಸುವುದದು ಪ್ರಮುಖವಾಗಿ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುವಂತೆ ಮಾಡುವ, ಗೌರವಿತವಾದಂತಹ ಬದುಕನ್ನು ನಡೆಸಲು ಸಾಧ್ಯವಾಗಿಸುವ ಇಂತಹ ಎಲ್ಲಾ ಕಾರ್ಯಗಳ ಹಿಂದೆ ತಾಯಿಯು ಕಣ್ಣಿಗೆ ಗೊಚರವಾಗದಂತೆ ಕಾರಣಿಕೃತಳಾಗಿದಾಳೆ. ಎಂಬುದನ್ನು ಕವಿ ಸೂಕ್ಷ್ಮವಾಗಿ ಹೇಳುತ್ತಾರೆ. ಈ ಕಾರ್ಯಯು ಅಷ್ಟು ಸುಲಭ ಆಗಿರುವುದಲ್ಲ ಎಂಬುದನ್ನು ಮುಂದಿನ ಸಾಲುಗಳಲ್ಲಿ ಕವಿ ಹೇಳಿರುವುದು ಗಮನಿಸಬಹುದು.

ಅಮ್ಮಿಯ ಕಣ್ಣು, ಮೂಗು, ಹಣೆ, ರೋಮಗಳಿಂದ ಇಳಿಯುವ
ಉಪ್ಪುನೀರಿನಿಂದಲೇ ಈ ನಿಗೂಢ ಬದುಕಿನೊಳಗೆ ನಿರ್ಜಿವ ಬಟ್ಟೆಗೆ ಪ್ರವೇಶ

ಇಲ್ಲಿ ಬಹಳ ಸರಳವಾಗಿ ಬೆವರಿನ ಹನಿ ಎಂದು ಹೇಳಬಹುದಾದರೂ ಇಲ್ಲಿ ಬಳಿಸಿರುವ ನಾಲ್ಕು ಪದಗಳು ಸೂಕ್ಷ್ಮವಾಗಿ ಗಮನಿಸಬಹುದು. ಕಣ್ಣು, ಮೂಗು, ಹಣೆ, ರೋಮಗಳು. ಇವು ಮನುಷ್ಯನ ಅಂಗಾಂಗಳು. ಒಂದೆ ಪದ್ಯದಲ್ಲಿ ದೇಹವೆಂದು ಬಳಸಬಹುದಾಗಿತ್ತು ಆದರೆ ಇಲ್ಲಿ ಬಂದಿರುವ ಹಣೆ ಮತ್ತು ರೋಮಗಳು ಬೇವರಿನ ಸಂಕೇತದಂತೆ ಕಂಡರು ತಾಯಿಯ ಕಷ್ಟವನ್ನು ಹೇಳುತ್ತವೆ. ಕಣ್ಣು ಮತ್ತು ಮೂಗಿನಿಂದ ಸುರಿಯು ನೀರು ತಾಯಿಯ ಅತಿಯಾದ ಕಷ್ಟ ಒಂದರ್ಥದಲ್ಲಿ ಹಲವೂ ಬಾರಿ ಬಡತನದ ತಾಯಿಂದಿಯರ ಕಣ್ಣಿರಿನ ಕಥೆಯೇ ಆಗಿರುತ್ತದೆ. ಇಲ್ಲಿ

ಮೂಗು ಮುಂದುವರೆದು ತಾಯಿಯು ದು:ಖದಿಂದ ಹಲುಬುವ ಸ್ಥಿತಿಯನ್ನು ಹೇಳುತ್ತದೆ. ಹೀಗೆ ತಾಯಿಯ ಕಷ್ಟದ ಬದುಕನ್ನು ಕವಿ ಹೇಳುತ್ತಾರೆ. ತಾಯಿಯು ಮಕ್ಕಳಿಗಾಗಿ ತ್ಯಾಗ ಮಾಡುವ ಜೀವವದು ಎಂಬುದನ್ನು ಪದ್ಯದಲ್ಲಿ ಬಂದಿರುವ ಸಾಲುಗಳಲ್ಲಿ ಗಮನಿಸಬಹುದು.

ಬಣ್ಣ ಬಣ್ಣದ ಬಟ್ಟೆ ಹೊಲಿದು ಜಗಕ್ಕೆ
ಉಡಿಸುವ ಅಮ್ಮ ಯಾವಗಲೂ ಧರಿಸುವುದು ಹಾಲು ಬಿಳಿ ಸೀರೆ

ಇದು ತಾಯಿಯು ತನ್ನ ಮಕ್ಕಳಿಗಾಗಿಯೇ ಎಲ್ಲವನ್ನು ತ್ಯಾಗಗೊಳಿಸುವ ಕರುಳು. ತನ್ನ ಮಕ್ಕಳಿಗೆ ಎಂತಹ ಸಂಕಷ್ಟದ ಸಂದರ್ಭದಲ್ಲಿಯು ಯಾವದೆ ಕೊರತೆ ಆಗದಂತೆ ನೋಡಿಕೊಳ್ಳುವ, ಹಬ್ಬ ಜಾತ್ರೆ ಸಂದರ್ಭದಲ್ಲಿ ಮಕ್ಕಳಿಗೆ ಕಷ್ಟದ ನಡುವೆವು ಬಟ್ಟೆಯನ್ನು ತಂದು ಕೊಟ್ಟು ಅವರ ಖುಷಿಯಲ್ಲಿಯೇ ಸಂಭ್ರಮಿಸುವ ಜೀವವದು. ಆದರೆ ತಾನು ಮಾತ್ರ ಸಾಧಾರಣವಾದ, ಹಳೆಯದಾದರು ಅದನ್ನೆ ಧರಿಸಿ ಖುಷಿ ಪಡುವುದು ತಾಯಿ ಹೃದಯ ವೈಶಾಲತೆಯನ್ನು ತೊರಿಸುತ್ತದೆ. ಇಲ್ಲಿ ಬಿಳಿ ಸೀರೆ ಅನ್ನವುದು ಸುಭ್ರತೆಯ, ಸರಳತೆಯ ಪ್ರಮುಖವಾಗಿ ಮನಸ್ಸಿನ ನಿರಾಳತೆಯನ್ನು ಹೇಳುತ್ತದೆ. ಕೊನೆಯ ಸಾಲುಗಳು ತಾಯಿ ಎರಡು ಬಗೆಯ ಶ್ರಮವನ್ನು ಹೇಳುತ್ತವೆ. ಒಂದು ಕುಟುಂಬದಲ್ಲಿ ಪಡುವ ಶ್ರಮ, ಇನ್ನೊಂದು ಮನೆಯ ಹೊರಗೆ ದುಡಿಯುವ ಶ್ರಮವಾಗಿದೆ. ನಾವು ಇಲ್ಲಿವರೆಗೆ ಮಹಿಳೆಯು ಮನೆಯಲ್ಲಿ ದುಡಿಯುವ ದುಡಿಮೆ ಶ್ರಮವೆಂದು ಗುರಿತಿಸುವ ಪ್ರಯತ್ನವೆ ಮಾಡದೆ ಇರುವುದನ್ನು ಮಹಿಳಾ ನೆಲೆಯಲ್ಲಿ ಕವಿತೆ ಪ್ರಶ್ನೆ ಮಾಡುತ್ತದೆ.

ಚಿಂದಿ ಮನಸುಗಳನ್ನು ಜೋಡಿಸಲು ಸೂಜಿ ಇದೆ
ಗೋಲವಿಶ್ವ ದಾರಿ ಸಾಗಲು ರಾಟೆ ಇದೆ
ಲೋಕ ವಿಕಾರಗಳನ್ನು ಕಡಿದು

ಇದು ಜಾತಿ, ಧರ್ಮ, ಲಿಂಗ, ಸಿದ್ಧಾಂತಗಳ ಕಾರಣಕ್ಕಾಗಿ ವಿಘಟನೆಗೊಂಡ ಈ ವಿಘಟನೆಗಾಗಿ, ಅಶಾಂತಿಯನ್ನು, ನೆಮ್ಮದಿವಿಲ್ಲದ ಅಭದ್ರತೆಯ ಬದುಕು ಪರಿಹರಿಸಿ ಇವೆಲವುಗಳ ತಪ್ಪುಗ್ರಹಿಕೆಯನ್ನು ಅಥವಾ ಪೂರ್ವಗ್ರಹಿತ ಪಿಡುಗುಗಳನ್ನು ಕತ್ತರಿಸಿ ಬಿಸಾಕಿ ಇವೆಲ್ಲವುಗಳ ಕಾರಣಕ್ಕೆ ವಿಘಟನೆಗೊಂಡ ಮನಸ್ಸುಗಳನ್ನು ಧೃವಿಕರಿಸುವ ಸಂಕೇತವಾಗಿ ಸೂಜಿ ಕಂಡುಬರುತ್ತದೆ. ಈ ಸಾಧ್ಯತೆಯು ತಾಯಿಯಂತ ಹೆಂಗರಳು ಮತ್ತು ಮನಸ್ಸುಗಳಿಂದ ಮಾತ್ರ ಸಾಧ್ಯವೆನ್ನುವ ಸೂಚನೆ ಕವಿತೆ ನೀಡುತ್ತದೆ.

ಹರಿದ ಚಂದ್ರ ತೂತಬಿದ್ದ ನಕ್ಷತ್ರ ಯಾರದೋ
ಚಾಟಿಏಟಿಗೆ ಗರ್ರನೆ ತಿರುಗುವ ಗ್ರಹ ಬುಗುರಿಗಳು

ದಿಕ್ಕುದೆಸೆಯಿಲ್ಲದೆ ಅಲೆಯುವ ಅಲೆಮಾರಿ
ಉಲ್ಕೆಗಳು, ಧೂಮಕೇತುಗಳು ನಿದ್ದೆಬಾರದೆ ಒದ್ದಾಡುತ್ತಿರಲು
ಒಂದು ಹಾಸಿಗೆಬೇಕು ಅಮ್ಮಿ, ಹೊಲಿದು ಕೊಡು.

ತಾಯಿಗೆ ಛಿದ್ರವಾದಂತಹ ಮನಸ್ಸುಗಳನ್ನು ಕೂಡಿಸುವ ಶಕ್ತಿಯಿದೆ ಅದಕ್ಕಾಗಿ ಕವಿ ಕೇಳಿಕೊಳ್ಳುತ್ತಾನೆ. ಧರ್ಮ, ಜಾತಿ, ಮತ- ಪಂಥಗಳ ಕಾರಣಕ್ಕಾಗಿ ಒಡೆದು ಹೋದವರನ್ನು ಕೂಡಿಸು ತಾಯಿ ಎಂದು ಕೇಳಿಕೊಳ್ಳುವುದು ಹರಕೆ ಅಥವಾ ಆಶಯ ಭಾವನೆಯ ಮೂಲಕ ಕವಿ ತಾಯಿ ಬಳಿ ಮೊರೆಯಿಡುತ್ತಾನೆ. ಇಲ್ಲಿನ ಚಿಹ್ನೆಗಳು ಧಾರ್ಮಿಕ ಸಂಕೇತದಂತೆ ಬಳಿಸಿದ್ದಾರೆ. ತೂತಬಿದ್ದ ನಕ್ಷತ್ರವು ಬಡತನದಲ್ಲಿರುವವರ ಸಂಕಟವನ್ನು ಹೇಳುತ್ತದೆ. ಅನ್ಯಾಯಕ್ಕೆ ಒಳಗಾಗುತ್ತಿರುವ ವರ್ಗ ಒಂದಡೆ, ಬದುಕನ್ನು ನಡೆಸಲು ಕೂಡ ಆಗದಂತ ದುಸ್ಥಿತಿ ಇನ್ನೊಂದಡೆ, ತಿನ್ನಲು ಅನ್ನವಿರದವರ ಸ್ಥಿತಿ ಮತ್ತೊಂದಡೆ, ಇವರೇಲ್ಲರನ್ನು ಸಮನವಾಗಿ ಮಾಡುವುದಕ್ಕೆ ಹೆಂಗರಳು ಬೇಕಾಗುತ್ತದೆ. ಇಲ್ಲಿ ಹೆಂಗರಳು ಎಂಬುದು ದಯೆ, ಕರುಣೆ, ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸುವ ಮನಸ್ಥಿತಿಯೇ ಆಗಿದೆ.

ಕಟ್ಟಿಕೊಂಡ ಗಂಡನನ್ನು ಹೊಟ್ಟೆಯ ಮಗುವಿನಂತೆ ಸಾಕಿ
ಹೊಲಿಗೆ ಯಂತ್ರದ ಕೂಡ ಕಾಲು ಶತಮಾನ ಕಳೆದ
ನನ್ನ ಅಮ್ಮಿಗೆ ನಮಾಜ ಎಂದರೆ ಜುಮ್ಮಾ
ಈದ ಎಂದರೆ ದೂದ್ ಖುರ್ಮಾ

ಇದು ತಾಯಿಯ ಜವಾಬ್ದಾರಿಯನ್ನು ಹೇಳುತ್ತದೆ. ಹಲವು ಬಾರಿ ಮಕ್ಕಳ ಶ್ರೇಯಸ್ಸು ಹಾಗೂ ನೋಡಿ ಕೊಳ್ಳುವ ಪೊರೆಯುವ ಕರ್ತ್ಯವ್ಯಯಿಂದ ನುಣಚಿಕೊಂಡಾಗಲು ತಾಯಿಯು ಇದರಿಂದ ವಿಮುಖಗೊಂಡು ಬದುಕು ಮಾಡಿರುವ ಉದಾರಣೆಗಳು ಇಲ್ಲವೇ ಎನ್ನುವಷ್ಟು ವಿರಳವೆಂಬುದರಲ್ಲಿ ಯಾವದೆ ಅನುಮಾನವಿಲ್ಲ. ತಾಯಿ ತನ್ನ ಜೀವವನ್ನು ಪಣಕಿಟ್ಟು ಆದರೂ ಮಕ್ಕಳನ್ನು ಮಾತ್ರವಲ್ಲದೆ. ತನ್ನ ಗಂಡನನ್ನು ಕೂಡ ಹಲವು ಬಾರಿ ಮಗುವಿನಂತೆ ಸಾಕುವ ಪರಿ ಹೊಸದೆನಲ್ಲ, ಹಲವಾರು ಪುರುಷರು ಕೆಲಸವಿಲ್ಲದೆ ತಿರುಗುವ, ದುಶ್ಚಟಗಳಿಗೆ ಬಲಿಯಾಗುವ, ಇನ್ಯಾವುದೋ ವ್ಯಸನಕ್ಕೆ ಈಡಾಗುವ ಸಂದರ್ಭದಲ್ಲಿವು ತಾಯಿ ಮಕ್ಕಳನ್ನು ಹಲವು ಬಾರಿ ಗಂಡನನ್ನು ಸಾಕುವ ಅನಿವ್ಯಾರ್ಯತೆ ಒಳಗಾಗಿ ಪ್ರಶಮಾಣಿಕವಾಗಿ ಕಷ್ಟದ ನಡುವೆ ನಿಭಾಯಿಸುವ ತಾಯಿಯ ಮಹತ್ವನ್ನು ಕವಿ ಹೇಳುತ್ತಾರೆ.

ಮುಂದುವರೆದು ತನ್ನ ಕೆಲಸದಲ್ಲಿ ಎಷ್ಟು ತಲ್ಲಿನಳಾಗುತ್ತಾಳೆ ಎಂಬುದಕ್ಕೆ ನಮಾಜಿಗೂ ದಿನಾಲು ಮಾಡಕ್ಕೆ ಆಗದೆ 'ಜುಮ್ಮನೆ ನಮಾಜ' ಆಗಿದೆ ಅಂದರೆ ವಾರಕ್ಕೆ ಒಂದು ದಿವಸ ಮಾತ್ರ ಮಾಡುತ್ತಿದ್ದಳು ಪ್ರಮುಖವಾಗಿ ತಾಯಿ ಮಕ್ಕಳಿಗೆ ಸಾಕುವುದು ತನ್ನ ಧರ್ಮ ನಮಾಜಕ್ಕಿಂತಲೂ ಮಹತ್ವದಾಗಿದೆ. ಕಾಯಕದಲ್ಲಿಯೇ ದೇವರನ್ನು ಧರ್ಮವನ್ನು

ಕಾಣುವ ಪರಿಯನ್ನು ಕವಿ ಸೂಕ್ಷ್ಮವಾಗಿ ಕವಿತೆ ಹೇಳುತ್ತದೆ. ಹಲವು ಬಾರಿ ಕೆಲಸ ಅಥವಾ ಜವಾಬ್ದಾರಿಗಳು ಇಲ್ಲದೆ ಇರುವಾಗ ಹಲವಾರು ಕಟ್ಟಳೆಗಳಲ್ಲಿ ಮುಳುಗುವ ಸಾಧ್ಯತೆವಿರುತ್ತದೆ ಎಂಬ ಎಚ್ಚರವು ಕವಿತೆ ಹೇಳುವಂತೆ ಕಂಡುಬರುತ್ತದೆ. ಮುಂದುವರೆದು ಬಡತನವು ಅಂತಹ ಸ್ಥಿತಿಯಿಂದ ದೂರ ಸರಿದು ಬದುಕನ್ನು ನಡೆಸುವ ಹಲವಾರು ಬಡ ಮುಸ್ಲಿಂರ ಬದುಕನ್ನು ಕೂಡ ಕವಿತೆ ಹೇಳುತ್ತದೆ.

ಇಲ್ಲಿ ಬುದ್ಧನ ಮಾತು ನೆನಪಿಸಿಕೊಳ್ಳಬಹುದು "ಹಸಿದವರಿಗೆ ದಮ್ಮ ಭೊದಿಸಬೇಡ" ಎನ್ನುವ ಮಾತು ಈ ಸಾಲುಗಳು ನೆನಪಿಸುತ್ತದೆ ಕವಿತೆ. ಪ್ರಮುಖವಾಗಿ 'ಈದ್ ಎಂದರೆ ದೂದ್‌ಖೂರ್ಮ' ಇದು ತಾಯಿಯ ಬಡತನವನ್ನು ಹೇಳುತ್ತದೆ. ಧರ್ಮ ಬದುಕ್ಕಾಗಿ ಇರುವುದು ಬದುಕೆ ಧರ್ಮಮಕ್ಕಾಗಿಲ್ಲ. ಧರ್ಮ ನಾವೇ ಮಾಡಿರುವುದೆಂಬ ಎಚ್ಚರವು ಕವಿತೆ ನೀಡುತ್ತದೆ.

> ರಟ್ಟೆ ಬೀಳುವತನಕ ರಾಟೆ ತಿರುಗಿಸಿ
> ಆರು ಮಕ್ಕಳ ಹಸಿವು ನೀಗಿಸುವ ಅಮ್ಮಿಗೆ
> ಕರುಳುಕುಡಿಗಳೆಂದರೆ ಕನಸ್ಸುಗಣ್ಣು.
> ಮರುಭೂಮಿಯಲ್ಲೂ ಸಿಗುವ ಹಸಿರು ಮಣ್ಣು.

ಈ ಪದ್ಯವು ತಾಯಿಯ ಪಡೆಯುವ ಸಂಕಟವನ್ನು ಹೇಳುತ್ತವೆ. ಆರು ಮಕ್ಕಳನ್ನು ಸಾಕುವುದು ಅನಿವಾರ್ಯವಾದ ತಾಯಿಗೆ ತನಗೆ ಆದ ದಣಿವನ್ನು ಲೆಕ್ಕಿಸದೆ 'ರಟ್ಟೆಯ ಬಿಳುವತನಕ' ಅಂದರೆ ಅವಳ ಕೈಯು ಒಂದು ರೀತಿಯಲ್ಲಿ ಸ್ಪರ್ಶದ ಅರಿವನ್ನು ಕಳೆದು ಕೊಳ್ಳುವಂತಹ ಸ್ಥಿತಿಯನ್ನು ಹೇಳುವುದೆ ತಾಯಿಯು ಮಕ್ಕಳನ್ನು ಸಾಕಲು ಪಡುವ ಸಂಕಷ್ಟವನ್ನು ಹೇಳುತ್ತದೆ.

ತಾಯಿಯು ಇವೆಲ್ಲವುಗಳನ್ನು ಮಾಡುವುದಕ್ಕೆ ಕಾರಣ ಅವರನ್ನು ಒಳ್ಳೆಯ ರೀತಿಯಲ್ಲಿ ಸಾಕಬೇಕು ಎಂಬ ಛಲ ಒಂದಡೆಯಾದರೆ ಮಕ್ಕಳ ಸಾಧನೆಯನ್ನು ನೋಡಬೇಕೆಂಬ ಕನಸ್ಸು ಈಗಾಗಲೆ ಕಟ್ಟಿಕೊಂಡಿದ್ದಾಳೆ.

ಆ ಕಾರಣಕ್ಕಾಗಿ ಇವೆಲ್ಲ ದಣಿಯು ಆಯಾಸ ಇವೆಲ್ಲವುಗಳು ಲೆಕ್ಕಕ್ಕೆ ಇಲ್ಲ ಪ್ರಮುಖವಾಗಿ ತಾಯಿಯು ಮಕ್ಕಳ ಭವಿಷ್ಯದ ಕಾಳಜಿ ಮತ್ತು ಕನಸ್ಸನ್ನು ಈ ಸಾಲುಗಳು ಹೇಳುತ್ತವೆ. ಅವಳಿಗೆ ಈ ಕರುಳು ಕುಡಿಗಳ ಕುರಿತು ಕಟ್ಟಿಕೊಂಡಿರುವ ಕನಸ್ಸು ಬಹಳ ಹಿರಿದಾದದ್ದು. ಅವಳಿಗೆ ಈ ಮಕ್ಕಳು ಸಿಕ್ಕಿರುವುದೆ ಮರುಭೂಮಿಯಲ್ಲಿ ಹಸಿರು ಮಣ್ಣು ದೊರೆತಂತೆ ಇದು ತಾಯಿಗೆ ಇರುವ ಮಕ್ಕಳ ಮಹತ್ವವನ್ನು ಹೇಳುತ್ತದೆ.

ನೀರು ಇದ್ದರೆ ಹಸಿರು ಮರುಭೂಮಿಯಲ್ಲಿ ಇವೆರಡು ಗೈರು ಒಂದು ವೇಳೆ ದೊರೆತರೆ ಆಗುವ ಖುಷಿ ಹೇಳತೀರದು. ಹಾಗೆಯ ತಾಯಿಯು ಮಕ್ಕಳ ಸಂದರ್ಭದಲ್ಲಿ ಪಡುವ ಸಂತೋಷಕ್ಕೆ ಲೆಕ್ಕವಿಲ್ಲದು ಎಂಬುದನ್ನು ಕವಿತೆಯು ಹೇಳುತ್ತದೆ. ಹಲವಾರು ನಿಟ್ಟಿನಲ್ಲಿ ತಾಯಿಯ ಗುಣಗಳನ್ನು ಕವಿತೆ ಉದ್ದಕ್ಕೂ ಹೇಳಲಾಗುತ್ತದೆ.

**ಆಕರ ಗ್ರಂಥಗಳು**

೧. ಸಾಹಿತ್ಯ ಸಂಚಲನ ಪ್ರಥಮ ಪಿ.ಯು.ಸಿ. ಕನ್ನಡ ಪಠ್ಯ ಪುಸ್ತಕ

೨. ಅರಿವಿನ ನೆಲೆಗಳು - ರಾಜೇಂದ್ರ ಚೆನ್ನಿ

೩. ಸದ್ಯದ ಹಂಗು - ರಾಜೇಂದ್ರ ಚೆನ್ನಿ

೪. ವಾಸ್ತವವಾದ - ಟಿ.ಪಿ. ಅಶೋಕ ಅಭಿನವ ಪ್ರಕಾಶನ